PRESENTATION OF PETITION

SRI S. S. ARAKERI.—Sir, I beg to present the petition signed by the Villagers of Horti village, Indi taluk, Bijapur district regarding construction of building for the Primary Health Centre.

MR. SPEAKER —Petition presented

FINANCIAL BUSINESS

Voting of Demands for grants-for the year 1982-83

Demands Nos. 30, 31 & 32

ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ).—ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯಪೌರಾಡಳಿತ ಹಾಗೂ ವಸತಿ ಸಚಿವರು ಅವರ ಇಲಾಖೆಯ ಬೇಡಿಕೆಗಳನ್ನು ಏನು ಈ ಸಭೆಯ ಮುಂದೆ ಇಟ್ಟಿದ್ದಾರೆ, ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಕೆಲವು ಮಾತುಗಳನ್ನು ಆಡುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನಮ್ಮ ಪಕ್ಷದ ಸರ್ಕಾರ ೧೯೭೮ರಲ್ಲಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಬಹಳ ಉತ್ತಮವಾದ ಕೆಲಸ ಗಳನ್ನು ಮಾಡಿದೆ. ಆದರೆ ನಮ್ಮ ವಿರೋಧಪಕ್ಷದ ಸದಸ್ಯರುಗಳು ಅದರಲ್ಲಿ ಕೆಲವು ತಪ್ಪುಗಳನ್ನು ಎತ್ತಿ ತೋರಿಸುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಒಂದು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಅದು ತಪ್ಪು ಎಂದು ನಾನಾದರೂ ಹೇಳುವುದಕ್ಕೆ ತಯಾರು ಇಲ್ಲ ಏಕೆಂದರೆ ಅದು ವಿರೋಧಪಕ್ಷದವರ ಕರ್ತವ್ಯ ವಾಗಿದೆ. ಆದರೂ ಕೂಡ ಸರ್ಕಾರದವರು ಮಾಡಿರತಕ್ಕಂಥ ಒಳ್ಳೆಯ ಕೆಲಸಗಳ ಬಗ್ಗೆ ಮೆಚ್ಚುಗೆ ಯನ್ನು ವ್ಯಕ್ತಪಡಿಸತಕ್ಕಂಥ ಸೌಜನ್ಯವನ್ನಾದರೂ ಅವರು ತೋರಿಸಬಹುದಾಗಿತ್ತು. ಆದರೆ ಅವರು ಆ ಸೌಜನ್ಯವನ್ನು ತೋರಿಸಿಲ್ಲ. ೧೯೮೦ರಲ್ಲಿ ನಮ್ಮ ಸರ್ಕಾರದವರು ಸುಮಾರು ೮೪ ಕುಡಿಯುವ ನೀರಿನ ಯೋಜನೆಗಳನ್ನು ಸುಮಾರು ೧೩ ಒಳಚರಂಡಿ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ಸುಮಾರು ೩೯–೪೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮೈಸೂರು, ಹೊನ್ನಾವರ, ಕುಮಟ, ಹುಕ್ಕೇರಿ, ಸಂಕೇಶ್ವರ ಮುಂತಾದ ಕಡೆಗಳಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ಅದೇ ರೀತಿಯಲ್ಲಿ ಬೆಂಗಳೂರು ನಗರಕ್ಕೆ ಇವತ್ತು ಕುಡಿಯುವ ನೀರಿನ ಪೂರೈಕೆಗಾಗಿ ಕಾವೇರಿ ಯೋಜ ನೆಯ ಎರಡನೆಯ ಹಂತವನ್ನು ಮಂಜೂರು ಮಾಡಿದ್ದು ಇದಕ್ಕಾಗಿ ಸರ್ಕಾರ ೫೫ ಕೋಟಿ ರೂಪಾಯಿ ಗಳನ್ನು ವೆಚ್ಚ ಮಾಡುತ್ತಾ ಇದೆ. ಇದೆಲ್ಲಕ್ಕಿಂತ ಮುಖ್ಯವಾಗಿ ೨೦ ಅಂಶದ ಕಾರ್ಯಕ್ರಮಗಳ ಮೇರೆಗೆ ಗ್ರಾಮೀಣ ವಸತಿ ಯೋಜನೆಯಲ್ಲಿ ಜನತಾ ಮನೆಗಳನ್ನು ಕಟ್ಟಿಸತಕ್ಕಂಥ ದಿಶೆಯಲ್ಲಿ ಎಲ್ಲಾ ವ್ಯವಸ್ಥೆ ಗಳನ್ನೂ ಮಾಡಿದೆ. ಹಿಂದಿನ ಸರ್ಕಾರದವರು ೧೯೭೩ರಿಂದ ೧೯೭೮ರವರೆಗೆ ೧ ಲಕ್ಷ ೮೦ ಸಾವಿರ ಮನೆ ಗಳನ್ನು ಕಟ್ಟಿ ಪೂರೈಸಿದ್ದರೆ, ನಮ್ಮ ಸರ್ಕಾರದವರು ವರ್ಷಕ್ಕೆ ೨೯ ಸಾವಿರ ಮನೆಗಳಂತೆ ಸುಮಾರು ೧ ಲಕ್ಷ ೧೮ ಸಾವಿರ ಮನೆಗಳನ್ನು ಕಟ್ಟಿಸಿ ದಾಖಲೆಯನ್ನು ಸ್ಥಾಪಿಸಿದ್ದಾರೆ. ಈ ಒಂದು ದಿಶೆಯಲ್ಲಿ ಈ ಇಲಾಖೆ ಬಹಳ ಚುರುಕಿನಿಂದ ಬಹಳ ಉತ್ತಮವಾದ ಕೆಲಸವನ್ನು ಮಾಡಿದೆ. ಈ ಇಲಾಖೆಯ ಜವಾ ಬ್ದಾರಿಯನ್ನು ವಹಿಸಿಕೊಂಡಿರತಕ್ಕಂಥ ಸನ್ಮಾನ್ಯ ಧರ್ಮಸಿಂಗ್‌ರವರು ಧರ್ಮರಾಯನಂತೆ ಬಹಳ ಉತ್ತಮವಾದ ಕಾರ್ಯವನ್ನೇ ಮಾಡಿ ಈ ಇಲಾಖೆಗೆ ಒಂದು ಕಳೆ ಕೊಟ್ಟಿದ್ದಾರೆ. ಈ ವರ್ಷ ಕೂಡ ೧ ಲಕ್ಷ ಜನತಾ ಮನೆಗಳನ್ನು ಮಂಜೂರು ಮಾಡುವುದಾಗಿ ಹೇಳಿದ್ದಾರೆ. ಕಳೆದ ವರ್ಷ ಅಂದರೆ ೧೯೮೧–೮೨ಕ್ಕೆ ೧ ಲಕ್ಷ ಜನತಾ ಮನೆಗಳನ್ನು ಕಟ್ಟಿದ್ದೇವೆ ಎಂದು ಏನು ಹೇಳಿದ್ದಾರೆ ಅದು ಕಾರ್ಯಗತ ವಾಗಿರುವುದು ೧೯೮೨ ಅಕ್ಟೋಬರ್‌ಗೆ. ತಾಲ್ಲೂಕು ಲೆವೆಲ್‌ನಲ್ಲಿ ಮನೆಗಳನ್ನು ಕಟ್ಟತಕ್ಕಂಥಾದ್ದು ಬಹುಶ: ಈ ವರ್ಷ ಆಗಬಹುದು. ಇದರಲ್ಲಿ ಮಾತ್ರ ಸ್ವಲ್ಪ ನಿಧಾನವಾಗಿದೆ. ಈ ವರ್ಷ ಹೊಸದಾಗಿ ೧ ಲಕ್ಷ ಮನೆ ಗಳನ್ನು ಅಂದರೆ ಪ್ರತಿ ತಾಲ್ಲೂಕಿನಲ್ಲಿ ೧ ಸಾವಿರ ಮನೆಗಳನ್ನು ಕಟ್ಟುತ್ತೇವೆ ಎಂದು ಹೇಳಿದ್ದಾರೆ. ಅಲ್ಲದೇ ೫೫೫೦ ವಿಲೇಜ್ ಅಕೌಂಟೆಂಟ್ಸ್‌ಗೆ ಮನೆಗಳನ್ನು ಕಟ್ಟಿಸಿಕೊಡತಕ್ಕಂಥ ಯೋಜನೆಯನ್ನೂ ಸಹ ಮಾಡಿ ದ್ದಾರೆ. ಹುಡ್ಕೋದಿಂದ ಸಹಾಯ ಪಡೆದು ೫೫೫೦ ವಿಲೇಜ್ ಅಕೌಂಟೆಂಟ್ಸ್‌ಗೆ ಮನೆಗಳನ್ನು ಕಟ್ಟಿ ಕೊಡಲು ಈಗಾಗಲೇ ಸುಮಾರು ೩೩೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಇದು ಬಹಳ ಉತ್ತಮವಾದ ಯೋಜನೆ. ಹಳ್ಳಿಗಳಲ್ಲಿ ಅನೇಕ ಜನ ವಿಲೇಜ್ ಅಕೌಂಟೆಂಟ್ ಮನೆಗಳಿಲ್ಲದೇ ಎಲ್ಲೆಲ್ಲೋ